# ಕರ್ನಾಟಕ ವಿಧಾನ ಪರಿಷತ್

ಸಭೆಯ ಸದಸ್ಯರ ಹೆಸರು : ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: : 74 (812)
ಉತ್ತರ ದಿನಾಂಕ : 25.09.2020

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | 2011-12ನೇ ಸಾಲಿನಲ್ಲಿ NRDWP ಕೇಂದ್ರ ಪುರಸ್ಕೃತ ಯೋಜನೆಯ Support Activity ಘಟಕದಡಿ ನೇಮಕಗೊಂಡು ಕಾರ್ಯ ನಿರ್ವಹಿಸಿದ BRC/CRC ಸೇವೆಯನ್ನು ಮುಂದುವರೆಸುವ ಕುರಿತು ಕಳೆದ ಅಧಿವೇಶನದಲ್ಲಿ ಸರ್ಕಾರ ಭರವಸೆ ನೀಡಿರುವುದು ನಿಜವೇ; ಭರವಸೆ ಈಡೇರಿದೆಯೇ; | BRC/CRC ಸೇವೆಯನ್ನು ಮುಂದುವರೆಸುವ ಬಗ್ಗೆ ಮಾನವೀಯತೆ ದೃಷ್ಟಿಯಿಂದ ಪ್ರಯತ್ನಿಸಲಾಗುವುದೆಂದು ಭರವಸೆ ನೀಡಲಾಗಿರುತ್ತದೆ.<br>NRDWP ಯೋಜನೆಯು ದಿನಾಂಕ 31.03.2020ಕ್ಕೆ ಮುಕ್ತಾಯಗೊಂಡಿರುತ್ತದೆ. ಡಿಸೆಂಬರ್-2019ರಲ್ಲಿ ಹೊರಡಿಸಲಾದ ನೂತನ "ರಾಷ್ಟ್ರೀಯ ಜಲ ಜೀವನ್ ಮಿಷನ್" ಯೋಜನೆಯ ಮಾರ್ಗಸೂಚಿಗಳಲ್ಲಿ BRC/CRCಗಳ ಸೇವೆಯನ್ನು ಪಡೆಯುವ ಪ್ರಸ್ತಾಪಗಳಿಲ್ಲದ ಕಾರಣ ಅವರುಗಳ ಸೇವೆಯನ್ನು ದಿನಾಂಕ 31.03.2020ಕ್ಕೆ ಮುಕ್ತಾಯಗೊಳಿಸಲಾಗಿರುತ್ತದೆ. |
| ಆ. | ಸರ್ಕಾರದ ಭರವಸೆಯಂತೆ ಯಾವ ಯಾವ ಜಿಲ್ಲೆಗಳಲ್ಲಿ BRC/CRC ಸೇವೆಯನ್ನು ಮುಂದುವರೆಸಲಾಗಿದೆ; (ವಿವರವಾದ ಮಾಹಿತಿ ನೀಡುವುದು) | NRDWP ಯೋಜನೆಯು ದಿನಾಂಕ 31.03.2020ಕ್ಕೆ ಮುಕ್ತಾಯಗೊಂಡಿರುವುದರಿಂದ ಯಾವುದೇ ಜಿಲ್ಲೆಗಳಲ್ಲಿ BRC/CRCಗಳ ಸೇವೆಯನ್ನು ಮುಂದುವರೆಸಿರುವುದಿಲ್ಲ. |
| ಇ. | ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು WP 5628/2020 ಹಾಗೂ ಇತರೆ ನ್ಯಾಯಾಲಯಗಳಲ್ಲಿ BRC/CRC ಸಂಯೋಜಕರುಗಳು ತಮ್ಮ ಸೇವೆಯನ್ನು ಜಲ ಜೀವನ್ ಮಿಷನ್ ಯೋಜನೆಯಲ್ಲೂ ಮುಂದುವರೆಸಲು ಧಾವೆ ಹೂಡಿರುವುದು ನಿಜವೇ; ಹಾಗದಲ್ಲಿ ಸರ್ಕಾರ ಈ ಸಂಬಂಧ ಯಾವ ಕ್ರಮ ಕೈಗೊಂಡಿದೆ? | ಸೇವೆಯನ್ನು ಮುಂದುವರೆಸುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಮತ್ತು ಧಾರವಾಡ ಪೀಠಗಳಲ್ಲಿ BRC/CRCಗಳು ಧಾವೆ ಹೂಡಿರುತ್ತಾರೆ.<br>ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಮತ್ತು ಧಾರವಾಡ ಪೀಠದ ಮಧ್ಯಂತರ ಆದೇಶಗಳನ್ವಯ BRC/CRCಗಳ ಸೇವೆಯನ್ನು ಮುಂದಿನ ವಿಚಾರಣಾ ದಿನಾಂಕದವರೆಗೂ ಮುಂದುವರೆಸಲು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಗಳಿಗೆ ನಿರ್ದೇಶಿಸಲಾಗಿರುತ್ತದೆ.<br>ಸದರಿ ಧಾವೆಗಳಿಗೆ ಸಂಬಂಧಪಟ್ಟಂತೆ ಕಂಡಿಕೆವಾರು ಉತ್ತರ ಮತ್ತು Statement of Objections ಗಳನ್ನು ಮಾನ್ಯ ಉಚ್ಚ ನ್ಯಾಯಾಲಯದ ಸಂಬಂಧಪಟ್ಟ ಪೀಠಗಳಿಗೆ ಸಲ್ಲಿಸಲಾಗಿರುತ್ತದೆ. |
| ಈ. | BRC/CRC ಸಂಯೋಜಕರುಗಳ ಮನವಿಯ ಮೇರೆಗೆ ಕೇಂದ್ರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ರಾಜ್ಯ ಸರ್ಕಾರಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ಮಾತ್ರ ನೀಡುತ್ತಿರುವುದಾಗಿ ಸೂಚಿಸಿದ್ದು, ಸಿಬ್ಬಂದಿ ನೇಮಕ ವಿಚಾರ ರಾಜ್ಯ ಸರ್ಕಾರದ ವಿವೇಚನೆಗೆ ಬಿಟ್ಟಿರುವುದಾಗಿ ತಿಳಿಸಿರುವುದು ನಿಜವೇ; (ವಿವರವಾದ ಮಾಹಿತಿ ನೀಡುವುದು) | ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಯಲ್ಲಿ BRC/CRCಗಳಿಗೆ ಸಂಬಂಧಪಟ್ಟಂತೆ ಕೆಲಸ-ಕಾರ್ಯಗಳನ್ನು ಪ್ರಸ್ತಾಪಿಸಿರುವುದಿಲ್ಲ ಮತ್ತು ಸದರಿಯವರ ನೇಮಕ ಸಂಬಂಧ ಕೇಂದ್ರ ಸರ್ಕಾರದಿಂದ ವಿಶೇಷವಾದ ಸೂಚನೆಗಳನ್ನು ಇಲಾಖೆ ಪಡೆದಿರುವುದಿಲ್ಲ. |
| ಉ. | ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ 7610CH ರಂತೆ ಸರ್ಕಾರವು Policy Decision ಮಾಡಬೇಕಾಗಿರುವುದು ನಿಜವೇ; | ಜಲ ಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಗಳಲ್ಲಿ BRC/CRCಗಳ ಪ್ರಸ್ತಾಪವಿರುವುದಿಲ್ಲ ಹಾಗು ಮುಂದುವರೆಸಲು ಆಸ್ಪದವಿರುವುದಿಲ್ಲ. |
| ಊ | ಯಾವ ಕಾಲಮಿತಿಯಲ್ಲಿ ಸರ್ಕಾರವು Policy Decisionಗಳ ಸೇವೆಯನ್ನು ಯಥಾವತ್ತಾಗಿ ಮುಂದುವರೆಸುವುದು? | ಉದ್ಭವಿಸುವುದಿಲ್ಲ. |

ಸಂ:ಗ್ರಾಕುನೀ&ನೈಇ 42 ಗ್ರಾನೀಸ(4) 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು

# Karnataka Legislative Council

Member Name : Sri. Basavaraja Shivalingappa Horatti
Starred Question No. : 74 (812)
To be answered on : 25.09.2020

| Sl. No. | Question | Reply |
|---|---|---|
| 1 | During the previous Session whether the Government has assured to continue BRC/CRC who were working under Support Activity of Centrally sponsored NRDWP in 2011-12, if so, assurance is fulfilled; | Government has assured to try to continue BRC/CRC on humanitarian grounds.<br><br>NRDWP Project has ended on 31.03.2020. In the Jal Jeevan Mission Guidelines which was released in December-2019, there is no proposal of BRC/CRC services. Hence, the services of BRCs/CRCs were discontinued from 31.03.2020. |
| 2 | As per Government assurance, in which districts BRC/CRC services are continued; (detailed information to be provided) | Since NRDWP Project has ended on 31.03.2020, BRCs/CRCs services are not availed in any of the districts beyond 31.03.2020. |
| 3 | Whether BRC/CRC have filed a Writ Petition in the Hon'ble High Court, Bengaluru WP No. 5628/2020 and in other Courts to continue their services under Jal Jeevan Mission? If yes, what are the actions by Government? | To continue the services, few BRCs/CRCs have filed a Writ Petitions both in Bangalore and Dharwad Benches.<br><br>As per Hon'ble High Court's Interim Order, directions have been issued to the concerned Zilla Panchayat to continue BRCs/CRCs who have filed Writ Petition in Bengaluru and Dharwad Benches till next date of hearing.<br><br>Parawise replies and Statement of Objections were filed for the Writ Petitions in the respective Benches. |
| 4 | Whether the Department of Drinking Water and Sanitation, Government of India has intimated that GoI will support State Government only on Financial and Technical aspects, regarding appointment of personnel it is the discretion of the State Government? (detailed information to be provided) | In the Jal Jeevan Mission Guidelines, BRC/CRC roles and responsibilities are not proposed and also the Department has not received any special instructions from Government of India in this regard. |
| 5 | As per 7610CH whether the Government has to take a policy decision in this case? | There is no proposal and provision to continue the services of BRC/CRC in the Guidelines of Jal Jeevan Mission. |
| 6 | What is the time duration to implement policy decision to continue the same? | Does not arise. |

No. RDWSD/ 42 / RWS (4)/2020

**Sd/-**

(K.S. Eshwarappa)
Rural Development and Panchayath Raj Minister